



# ವಿದ್ಯಾಗಮ
## ನಿರಂತರ ಕಲಿಕಾ ಕಾರ್ಯಕ್ರಮ





– ಬಿ. ಎಸ್. ಶಶಿಕುಮಾರ್, ಸ.ಶಿ. ಸ.ಪ್ರೌ.ಶಾಲೆ, ಎಲೆಕ್ಯಾತನಹಳ್ಳಿ, ನೆಲಮಂಗಲ, ತಾ. ಬೆಂ. ಗ್ರಾ. ಜಿ.

ನಮಗೆಲ್ಲಾ ತಿಳಿದಿರುವಂತೆ 2020–21ನೇ ಸಾಲಿನ ಪ್ರಸ್ತುತ ಶೈಕ್ಷಣಿಕ ವರ್ಷವು ಜೂನ್ ಇಂದ ಆರಂಭವಾಗಬೇಕಿತ್ತು. ಆದರೆ ಕೋವಿಡ್–19 ಸೋಂಕಿನ ಕಾರಣದಿಂದ ಮಕ್ಕಳು ಶಾಲೆಗಳಿಂದ ಅನಿರ್ದಿಷ್ಟವಾಗಿ ದೂರ ಉಳಿಯುವಂತಾಗಿದೆ. ಈ ಹಿನ್ನೆಲೆಯಲ್ಲಿ ಮಕ್ಕಳ ಔಪಚಾರಿಕ ಕಲಿಕೆಗೆ ಹಿನ್ನಡೆ ಉಂಟಾಗಿದೆ. ಈ ಸನ್ನಿವೇಶವು ಮಕ್ಕಳ ಮುಂದಿನ ಕಲಿಕಾ ನಿರಂತರತೆಗೆ ಪರಿಣಾಮ ಬೀರದಂತೆ ಎಚ್ಚರವಹಿಸಬೇಕಾಗಿದೆ. ಈ ನಿಟ್ಟಿನಲ್ಲಿ ಇಲಾಖೆಯು ಔಪಚಾರಿಕ ಶಿಕ್ಷಣಕ್ಕೆ ಪರ್ಯಾಯವಾಗಿ ಮಕ್ಕಳನ್ನು ಶಾಲೆಯೊಂದಿಗೆ ಸಂಪರ್ಕದಲ್ಲಿ ಇಟ್ಟುಕೊಳ್ಳುವ ಹಾಗೂ ಅವರಲ್ಲಿ ನಿರಂತರ ಕಲಿಕೆಯನ್ನು, ಸ್ವಯಂ ಕಲಿಕಾ ವಿಧಾನಗಳ ಮೂಲಕ ಕಲಿಕಾ ಪ್ರಕ್ರಿಯೆಯನ್ನು ಮುಂದುವರಿಸಲು "ವಿದ್ಯಾಗಮ" ಎನ್ನುವ ಕಲಿಕಾ ಕಾರ್ಯಕ್ರಮವನ್ನು ಕೆಲವು ಅಂಶಗಳನ್ನು ಆಧರಿಸಿ ಅನುಷ್ಠಾನಗೊಳಿಸಲು ರೂಪಿಸಿದೆ.

**ದೂರದೃಷ್ಟಿ:** "ನೈಸರ್ಗಿಕ ವಿಕೋಪ ಅಥವಾ ಸಾಂಕ್ರಾಮಿಕ ರೋಗಗಳಂತಹ ಯಾವುದೇ ಮಹಾಮಾರಿ ಬಂದರೂ ಪ್ರತೀ ಮಗುವಿನ ಭವಿಷ್ಯದ ಕನಸನ್ನು ಯಶಸ್ವಿಗೊಳಿಸಲು, ನಿರ್ದಿಷ್ಟ ಸುರಕ್ಷಿತ ಕ್ರಮಗಳೊಂದಿಗೆ ಕನಿಷ್ಠ ಕಲಿಕೆಯನ್ನು ಕಟ್ಟಿಕೊಡುವುದು"

**ಕಾರ್ಯಕ್ರಮದ ಪ್ರಮುಖ ಧ್ಯೇಯೋದ್ದೇಶಗಳು:**

1) ಶಾಲೆ ಪುನರಾರಂಭವಾಗುವವರೆಗೂ ಮಕ್ಕಳನ್ನು ಶಾಲೆಯೊಂದಿಗೆ ಸಂಪರ್ಕಗೊಳಿಸುವುದು.

2) ಮಕ್ಕಳು ಮನೆಯಲ್ಲಿಯೇ ಅಗತ್ಯ ಮಾರ್ಗದರ್ಶನದೊಂದಿಗೆ ನಿರಂತರವಾಗಿ ಕಲಿಕಾ ಪ್ರಕ್ರಿಯೆ ಮುಂದುವರಿಸುವುದು.

3) ಬಾಲ ಕಾರ್ಮಿಕ, ಬಾಲ್ಯ ವಿವಾಹ ಇತ್ಯಾದಿ ಸಾಮಾಜಿಕ ಪಿಡುಗುಗಳಿಗೆ ಮಕ್ಕಳು ಒಳಗಾಗುವುದನ್ನು ತಡೆಗಟ್ಟುವುದು

4) ಮಕ್ಕಳ ಕಲಿಕೆಗೆ ಅಗತ್ಯವಾದ ಕಲಿಕಾ ಸಾಮಾಗ್ರಿಗಳನ್ನು ಮಾರ್ಗದರ್ಶಿ ಶಿಕ್ಷಕರು, ಇಲ್ಲವೇ ಪೋಷಕರ ಮೂಲಕ ತಲುಪಿಸುವುದು.

5) ಮಕ್ಕಳ ಪೋಷಕರಿಗೆ ಶಾಲೆಯಿಂದ ಕೊಡುವ ಆಹಾರ ಸಾಮಾಗ್ರಿಗಳನ್ನು ಒದಗಿಸಿ, ಸಮತೋಲನ ಆಹಾರದ ಬಳಕೆಯ ಬಗ್ಗೆ ಹಾಗೂ ಪ್ರಸ್ತುತ ಸಂದರ್ಭದಲ್ಲಿ ಸಮತೋಲನ ಆಹಾರದ ಪ್ರಾಮುಖ್ಯತೆ ತಿಳಿಸುವುದು.

6) ಶಾಲೆಗಳು ಮುಚ್ಚಿರುವ ಸಮಯದಲ್ಲಿ ಶಿಕ್ಷಕರ ಮೂಲಕ ಮಕ್ಕಳ ಮನೋಸ್ಥೈರ್ಯವನ್ನು ವೃದ್ಧಿಸುವುದು.

**ಕಲಿಕಾ ಸಾಮಗ್ರಿ:** ನೆರೆಹೊರೆ, ಗುಂಪುವಾರು ಮಕ್ಕಳು ಮತ್ತು ಪೋಷಕರನ್ನು ನಿಗಧಿತ ದಿನಾಂಕಗಳಂದು ಶಾಲೆಗೆ ಕರೆಸಿ, ಸಾಮಾಜಿಕ ಅಂತರ, ಸ್ಯಾನಿಟೈಸರ್ ಮತ್ತು ಮಾಸ್ಕ್ ಬಳಕೆಯೊಂದಿಗೆ ಚರ್ಚೆ ನಡೆಸಿ, ಕಲಿಯಲು ಅವಶ್ಯಕ ಸಾಮಾಗ್ರಿಗಳನ್ನು ಒದಗಿಸುವುದು

ಪಠ್ಯಪುಸ್ತಕಗಳು, ಗ್ರಂಥಾಲಯದ ಪುಸ್ತಕಗಳು, ಹಳೆಯ ಪುಸ್ತಕಗಳು, ಹಿರಿಯ ವಿದ್ಯಾರ್ಥಿಗಳ ಚಟುವಟಿಕಾ ಹಾಳೆಗಳು, ಮಾದರಿ ಚಟುವಟಿಕಾ ಹಾಳೆಗಳು, ಪ್ರಯೋಗಗಳಿಗೆ ಬೇಕಾದ ಸರಳ ವಸ್ತುಗಳು, ಅಭ್ಯಾಸ ಪುಸ್ತಕಗಳು, ಡೈರಿ, ದಿನಪತ್ರಿಕೆ ತುಣುಕುಗಳು, ಇತ್ಯಾದಿ.

**ಪಠ್ಯಕ್ರಮ:** ಪ್ರತಿ ಮಾರ್ಗದರ್ಶಿ ಗುಂಪಿನಲ್ಲಿ ವಿದ್ಯಾರ್ಥಿಗಳಿಗೆ ಕಲಿಕಾ ಪ್ರಕ್ರಿಯೆ ಪ್ರಾರಂಭಿಸುವ ಮುನ್ನ ಮಾರ್ಗದರ್ಶಿ ಶಿಕ್ಷಕರು ಕೋವಿಡ್–19 ಮಹಾಮಾರಿಯನ್ನು ತಡೆಗಟ್ಟಲು ವಿದ್ಯಾರ್ಥಿಗಳು ಅನುಸರಿಸಬೇಕಾದ ಎಚ್ಚರಿಕೆ ಕ್ರಮಗಳ ಬಗ್ಗೆ ತಿಳಿಸುವುದು.

ಕೋವಿಡ್–19 ಹಿನ್ನೆಲೆಯಲ್ಲಿ 2020–21ನೇ ಶೈಕ್ಷಣಿಕ ಸಾಲಿಗೆ ವಿಶೇಷವಾಗಿ ಸಿದ್ಧಪಡಿಸಿದ ಪಠ್ಯವಸ್ತುವನ್ನಾಧರಿಸಿ ಬೋಧನಾ ಪ್ರಕ್ರಿಯೆ ಮುಂದುವರಿಸುವುದು.

ಶಿಕ್ಷಕರು ಸ್ವತಃ ತಾವೇ ತಯಾರಿಸಿಕೊಂಡ/ಇಲಾಖೆಯಿಂದ ಹೊರಡಿಸಲಾದ ಏಕರೂಪ ವಾರ್ಷಿಕ ಕ್ರಿಯಾಯೋಜನೆ ಬಳಸಿಕೊಂಡು, ಪಠ್ಯದ ಪರಕಲ್ಪನೆಗಳಿಗೆ ಅನುಗುಣವಾಗಿ ಚಟುವಟಿಕೆಗಳು, ಚಟುವಟಿಕಾ ಹಾಳೆಗಳು ಮತ್ತು ಮೌಲ್ಯಮಾಪನ ತಂತ್ರ ಮತ್ತು ಸಾಧನಗಳನ್ನು ಸಿದ್ಧಪಡಿಸಿಕೊಳ್ಳುವುದು.

**ಮಧ್ಯಾಹ್ನ ಉಪಹಾರ:** ಮೊದಲೇ ತಿಳಿಸಿದ ಹಾಗೆ ಅಗತ್ಯ ಸುರಕ್ಷಿತ ಕ್ರಮಗಳನ್ನು ಅನುಸರಿಸಿ ಮಕ್ಕಳು ಮತ್ತು ಪೋಷಕರನ್ನು ಶಾಲೆಗೆ ಬರಮಾಡಿಕೊಂಡು, ಒಂದು ತಿಂಗಳಿನ ಪೂರ್ಣ ಪ್ರಮಾಣದ ಆಹಾರ ಧಾನ್ಯಗಳನ್ನು ಒದಗಿಸುವುದು.

ಸಮತೋಲನ ಆಹಾರ ಬಳಕೆಯ ಅರಿವನ್ನುಂಟುಮಾಡಿ ಈ

ಪುಟ– 35ಕ್ಕೆ